OS 150 of 2017

ಸಾಕ್ಷಿಯನ್ನು ದಿ:30.05.2023 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**<u>ಮುಂದುವರೆದ ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-</u>**

1. ನಾನು ಮತ್ತು ಪ್ರತಿವಾದಿ ಸಂಬಂಧಿಕರಲ್ಲ. ನನಗೆ ಪ್ರತಿವಾದಿ ಗಂಡ ಗೊತ್ತಿದ್ದಾರೆ ನಾವು ಅವರು ವಿಶ್ವಾಸದಿಂದ ಇದ್ದೆವೆಂದರೆ ಸರಿ. ಪ್ರತಿವಾದಿಯ ಗಂಡ ಮರಣ ಹೊಂದಿದ ನಂತರ ಪ್ರತಿವಾದಿಯ ವಿರುದ್ದ ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದಿದ ಸಮಯದಲ್ಲಿ ನನಗೆ 30 ವರ್ಷ ವಯಸ್ಸಾಗಿತ್ತು. ನನ್ನ ತಂದೆ ದಾವಾ ಆಸ್ತಿಯನ್ನು ಪ್ರತಿವಾದಿಯ ಗಂಡನಿಗೆ ಮಾರಾಟ ಮಾಡಿದ್ದಾರೆಂದರೆ ಗೊತ್ತಿಲ್ಲ. ಸದರಿ ಮಾರಾಟವಾದ ನಂತರ ಪ್ರತಿವಾದಿಯ ಗಂಡ ದಾವಾ ಆಸ್ತಿಯನ್ನು ಸ್ವಾಧೀನದಲ್ಲಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ದಾವಾ ಸ್ವತ್ತನ್ನು ಕುಟುಂಬದ ಖರ್ಚಿಗಾಗಿ ಹೊನ್ನಮ್ಮನಿಗೆ ರೂ.400/- ಗಳಿಗೆ ಭೋಗ್ಯಕ್ಕೆ ಕೊಟ್ಟಿದ್ದರೆಂದರೆ ನನಗೆ ಗೊತ್ತಿಲ್ಲ. ದಿಃ 14.11.1977 ರಲ್ಲಿ ನನ್ನ ತಂದೆ ದಾವಾ ಆಸ್ತಿಯನ್ನು ಪ್ರತಿವಾದಿಯ ಗಂಡನಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ಯಾವತ್ತೂ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ, ನಾನು ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ
ಮಳವಳ್ಳಿ.